
ಕಂಠಬಿರಿ ಶಾಪ ಹಾಕುತ್ತಲೇ ಅವುಗಳನ್ನು ಮೊಗೆದು ತೆಗೆದು ಉಪ್ಪಾಕಿ ಬಿಸಾಡುತ್ತಿದ್ದೆ. ಹೊಸದಾಗಿ ಬಾಯಿ ಬಂದಿದ್ದಲ್ಲವೇ... ಅವುಗಳ ಆರ್ಭಟವೂ ಜೋರಾಗಿತ್ತು. ಎಲ್ಲಾ ಮುಗಿಸುವಷ್ಟರಲ್ಲಿ ಆಫೀಸಿಗೆ ಹೋಗುವಷ್ಟು ತ್ರಾಣ ಉಳಿಯಲಿಲ್ಲ. ರಜೆ ಜಡಿದೆ. ಇಷ್ಟೇ ಕೆಲಸಕ್ಕೆ ಸುಸ್ತಾದೆ ಎಂದಲ್ಲ, ರಾತ್ರಿ ಸರಿಯಾಗಿ ನಿದ್ದೆಯೂ ಬರಲಿಲ್ಲ. ಹುಂ! ನಾನು ಮಾಡಿದ ಪಾಪಕರ್ಮಗಳಂತೆ... ಏನು ಮಾತದು? ನನ್ನ ಮನೆಯೊಂದರಲ್ಲೇ ಹೀಗಾದರೆ ಒಂದರ್ಥ. ಇದೀಗ ಕಂಡಕಂಡಲ್ಲಿ ಏಳುತ್ತಿವೆಯಲ್ಲ ಈ ಬಸವನಹುಳುಗಳು... ಅದೆಲ್ಲಾ ಯಾರ ಪಾಪಕರ್ಮಗಳು ಹಾಗಾದರೆ? ಅಷ್ಟೊಂದು ಪಾಪಗಳನ್ನು ಯಾವುದಾದರೂ ಒಬ್ಬ ಮನುಷ್ಯ ಮಾಡುವುದಕ್ಕೆ ಶಕ್ಯವೇ ಇಲ್ಲ. ಛೇ, ಮಾತೊಂದು ಆಡಲು ಬಂದರೆ ಸಾಕೇ... ಕೊಳಕು ಮಾತಾಡುವ ಮತಿಹೀನ ಪ್ರಾಣಿಗಳು. ಆದರೊಂದು ವಿಷಯ, ಅವುಗಳನ್ನು ಎಷ್ಟೇ ಬೈದುಕೊಂಡರೂ ಎಲ್ಲೋ ಮುಳ್ಳು ಚುಚ್ಚಿದಂತಾಗುತ್ತಿದೆಯಲ್ಲ... ಏನದು? ಯಾಕದು?



ಒಳ್ಳೆಯದೊಂದು ನಿದ್ದೆ ತೆಗೆದೆ. ಎದ್ದು ಚಹಾ ಕುಡಿದ ಮೇಲೆ ಮನೆಗೊಂದಿಷ್ಟು ದಿನಸಿ ತರುವುದು ನೆನಪಾಯಿತು. ಕಾರಿನ ಬಳಿ ತೆರಳಿದರೆ ಕಾಲ ಬುಡದಲ್ಲೇ ಒಂದಿತ್ತು... ಅದೇ... ನನ್ನ ನಿದ್ದೆ ಹಾಳು ಮಾಡಿದ ಪ್ರಾಣಿ. ಬೇರೆ ಕೆಲ್ಸ ಇಲ್ಲ ನಿಮ್ಗೆ ಗೊಣಗಿದೆ.

'ನಿಮ್ಮಗಳ ಕೈಚಳಕದಿಂದಲೇ ನಮ್ಮ ಸೃಷ್ಟಿಯಾಗಿದ್ದು. ಮಾಡಿದ್ದುಣ್ಣೋದು ಬಿಟ್ಟು ನಮಗೆ ಬಯ್ಯೋದ್ಯಾಕೆ?'

'ನಾನೇನನ್ಯಾಯ ಮಾಡಿದ್ದೀನಿ ಅಂತ ಹೀಗೆ ಗೋಳಾಡಿಸ್ತೀರಿ... ಅದನ್ನಾದ್ರೂ ಹೇಳಿ.'

'ಎಲ್ಲಿಂದ ಶುರು ಮಾಡ್ಲಿ? ಅಷ್ಟೊಂದು ವರ್ಷಗಳ ನಿಮ್ಮ ಕರ್ಮಗಳೇ ಈಗ ನಮ್ಮ ರೂಪದಲ್ಲಿ ಬಂದು ನಿಂತಿವೆ.'

'ನ್ಯಾಯನೀತಿ ಇಲ್ಲದೆ ಏನೇನೋ ಆರೋಪ ಮಾಡ್ತೀಯಲ್ಲ ನನ್ಮೇಲೆ... ಪ್ರಪಂಚದಲ್ಲಿ ಯಾರಾದ್ರೂ ನಂಬುವ ಮಾತಾ ಇದು? ಅದೇನು ಹೇಳು ನೋಡಣ.'

'ನನ್ನತ್ರ ಕೆದಕುವ ಬದ್ಲು ನಿನ್ನ ಅಂತರ್ಯಾನ್ನೊಮ್ಮೆ ಕೆದಕಿ ನೋಡು.'

'ಕೆದಕಿದ್ರೆ ಅಲ್ಲೇನಿದೆ... ಮಣ್ಣು! ಅರ್ಥವಿಲ್ಲದೆ ಏನೇನೋ ಗಳಹುತ್ತಿರುವೆ.'

'ಕೆದಕಿ ನೋಡೋದಕ್ಕೆ ಹೆದ್ರಿಕೆ ನಿಂಗೆ. ಅದ್ಕೇ ಹಂಗಂತೀಯ.'

'ದರಿದ್ರ ಹುಳವೇ! ಎಷ್ಟು ಮಾತು ನಿಂದು? ಹೋಗ್ಲಿ ಪಾಪ ಅಂತ ಕರುಣೆಯಿಂದ ಮಾತಾಡ್ಸಿದ್ರೆ ನನ್ಮೇಲೇ ಬೆರಳು ತೋರಿಸ್ತೀಯ. ತಡಿ ಮಾಡ್ತೀನಿ' ಎನ್ನುತ್ತಾ ಅದರ ಮೇಲೆಯೇ ಕಾರೋಡಿಸಿಬಿಟ್ಟೆ. ಒಂಥರಾ ಸಮಾಧಾನವಾಯ್ತು.

ಸಮೀಪದ ಸೂಪರ್ ಬಜಾರೊಂದಕ್ಕೆ ತೆರಳಿದೆ. ಅಲ್ಲೂ ಅವುಗಳದ್ದೇ ಉಪದ್ರ. ಅಲ್ಲಿನ ಒಂದಿಷ್ಟು ಸಿಬ್ಬಂದಿಗಳು ಹುಬ್ಬು ಗಂಟಾಕಿಕೊಂಡು ಇವುಗಳನ್ನು ಗುಡಿಸಿ ಎಸೆಯುತ್ತಿದ್ದರು. ಅದರ ಮಾಲೀಕ ನನಗೆ ಪರಿಚಿತ, ಪ್ರಾಯದಲ್ಲೂ ಹಳಬ. ಚಿಂತಾಕ್ರಾಂತನಾಗಿ ಕೂತಿದ್ದ ಆತ ನನ್ನನ್ನು ನೋಡುತ್ತಿದ್ದಂತೆಯೇ, 'ಎಂಥಾ ಕಾಲ ಬಂತು ನೋಡಿ. ಬಸವನ ಹುಳುಗಳಿಗೂ ಬಾಯಿ ಬಂತಲ್ಲ. ಏನೇನೋ ಮಾತಾಡ್ತವೆ' ಎಂದು ದುಃಖ ತೋಡಿಕೊಂಡ. ನನ್ನದೇ ಹಾಸಿ ಹೊದ್ದುಕೊಳ್ಳುವಷ್ಟಿರುವಾಗ ಇವನಿಗೇನು ಹೇಳಲಿ. 'ಬಿಡಿ ಸಾರ್, ಎಲ್ಲಾರ ಮನೆ ದೋಸೆನೂ ತೂತು. ಎಲ್ರಿಗೂ ಇದೇ ಸಮಸ್ಯೆ' ಎಂದು ದೇಶಾವರಿ ಸಮಾಧಾನ ಹೇಳಿ ಮುಂದೆ ಹೋದೆ. ಹಾಗಾದರೆ ಇವನೇನು ಪಾಪ ಮಾಡಿದ್ದಾನೆ ಎಂಬ ಬಗ್ಗೆಯೇ ಮನಸ್ಸು ಗಿರ್ಕಿ ಹೊಡೆಯುತ್ತಿತ್ತು. ಬೇಡದ ಕೆಟ್ಟ ಕುತೂಹಲ ಅದುಮಿ ನನ್ನ ವಸ್ತುಗಳನ್ನು ಬಿಲ್ಲಿಂಗ್‌ಗೆ ತೆಗೆದುಕೊಂಡು ಹೋದೆ. ಅತೀತ ಕೆದಕುವುದು ಯಾರಿಗಿಷ್ಟ ಹೇಳಿ?

ಆನಂತರವಂತೂ ನನ್ನ ತಾಳ್ಮೆ ಪರೀಕ್ಷಿಸುವ ಘಟನೆ ನಡೆದುಹೋಯಿತು. ಮೊದ್ಲೇ ಹೇಳಿದ್ದೆನಲ್ಲ ಮನಸ್ಸು ಸರಿಯಿಲ್ಲವೆಂದು, ಅದಕ್ಕಾಗಿಯೇ ಸ್ವಲ್ಪ ಸುತ್ತಾಡಿಕೊಂಡು ಬರೋಣವೆಂದು ಹೋದೆ. ಎಲ್ಲಿ ಹೋಗಲಿ ತಿಳಿಯದೆ ಸಮೀಪದ ಪಾರ್ಕಿನಲ್ಲಿ ಕೂತೆ. ಅಲ್ಲಿ ಅಡ್ಡಾಡುತ್ತಿದ್ದ ಒಂದಿಷ್ಟು ಅಜ್ಜಿಯರು, ಅಜ್ಜಂದಿರೂ ಇದರ ಬಗ್ಗೆಯೇ ಮಾತಾಡುತ್ತಿದ್ದರು. ರಾಮೇಶ್ವರಕ್ಕೆ ಹೋದ್ರೂ ಶನೀಶ್ವರನ ಕಾಟ ತಪ್ಪಿದ್ದಲ್ಲ ಎಂದು ಬಯ್ಯುತ್ತಾ ಅಲ್ಲಿಂದ ಜಾಗ ಖಾಲಿ ಮಾಡಿದೆ. ಸಮೀಪದ ಮಾಲೊಂದಕ್ಕೆ ತೆರಳಿದರೆ ಅಲ್ಲಿಯೂ ಈ ಬಗ್ಗೆ ಗುಸುಗುಸು ಕೇಳಬೇಕೆ! ಇದನ್ನೆಲ್ಲಾ ಮರೆಯಬೇಕೆಂದರೆ ಸಿನಿಮಾ ನೋಡಬಹುದೆಂದು ಭಾವಿಸಿ ಅಲ್ಲಿಯೇ ಇದ್ದ ಚಿತ್ರಮಂದಿರಕ್ಕೆ ನುಗ್ಗಿದೆ. ಯಾವುದೋ ಕನ್ನಡ ಸಿನಿಮಾ... ಕೂತ ಸೀಟೆಲ್ಲ ಗುಳುಗುಳಿ ಹರಿದಾಡಿ ತಣ್ಣಗಾದಂತೆನಿಸಿ ಬೆಚ್ಚಿಬಿದ್ದೆ. ಥೂ! ಇಲ್ಲಿ ಬೇಡವೆಂದು ಪಕ್ಕದ ಪರದೆಯಲ್ಲಿದ್ದ ಹಿಂದಿ ಸಿನಿಮಾಕ್ಕೆ ನುಗ್ಗಿದೆ. ಅಲ್ಲಿನ ಪರದೆಯ ಮೇಲೆ ಬಂದ ಮುಖಗಳ ಸ್ಮೈಲ್ ಸಹ ಸ್ನೈಲ್‌ಗಳಂತೆ ಕಂಡು ಅಲ್ಲಿಂದಲೂ ಹೊರಬಿದ್ದೆ. ಯಾರ ಮುಖ ನೋಡಿ ಎದ್ದೆನೋ ಎಂದು ಗೊಣಗುತ್ತಾ ಸಮೀಪದ ಬಟ್ಟೆಯಂಗಡಿಗೆ ಹೋಗಿ ಓಡಾಡಿದೆ. ಅವುಗಳ ಹೊಳೆಯುವ ದಾರಿಯ ಗುರುತು ಕಂಡಾಗಲೆಲ್ಲ ನಮ್ಮದೇ ಪಾಪಗಳ ಗುರುತು ಕಂಡಂತಾಗಿ ಅಸ್ವಸ್ಥನಾಗುತ್ತಿದ್ದೆ. ಯಾರೇನು ಮಾತಾಡಿದರೂ ಇದೇ ವಿಷಯವೇ ಕೇಳಿದಂತಾಗಿ ಕಸಿವಿಸಿಯಾಗುತ್ತಿತ್ತು. ಮನೆಗೆ ಹೋಗಿ ಮುಸುಕಿಕ್ಕಿ ಮಲಗುವುದೇ ಸರಿ ಎಂದು ನಿರ್ಧರಿಸಿದೆ. ಬೆಡ್ರೂಮಿಗೆ ಬಂದರೆ ಮಂಚದ ಮೇಲೆಯೇ ಕುಳಿತಿದೆ ಈ ದ್ರಾಬೆ ಪ್ರಾಣಿ. 'ಹೋಗಾಚೆ... ಪೀಡೆ' ಎಂದು ಕಿರುಚಿದೆ.

'ಎಷ್ಟು ಹೆದ್ರಿಕೆ ನೋಡು ನನ್ನ ಕಂಡ್ರೆ ನಿಂಗೆ' ಅಣಕಿಸಿತದು.

'ನಾಲಿಗೆ ಎಲುಬಿಲ್ಲದ್ದು ನೋಡು, ಏನು ಬೇಕಿದ್ರೂ ಒದರಬಹುದು.'

'ಅಯ್ಯೋ! ನಾಲಿಗೆ ಒಂದೇ ಏನು... ನಮ್ಮ ಇಡೀ ಮೈಯ್ಯೇ ಎಲುಬಿಲ್ಲದ್ದು.'

'ಅದ್ಕರಿ! ಸುಲಭಕ್ಕೆ ನುಣುಚಿಕೋಬೋದು.'

'ಕರೆಕ್ಟ್! ನಿಮ್ಮ ತಪ್ಪುಗಳ ಮೂರ್ತರೂಪ ನಾವು. ಸುಲಭಕ್ಕೆ ನುಣುಚಿಕೊಳ್ಳಬೇಕಾದ್ದೇ.'

'ಏನು... ಏನು ನಿನ್ಮಾತಿನ ಅರ್ಥ? ಅಂಥದ್ದೇನು ಮಾಡಿದ್ದೀನಿ ಅನ್ನೋದ್ಬೇಕಲ್ಲ. ದಮ್ಮಿದ್ರೆ ಹೇಳೇಬಿಡು.'

'ಹೇಳಕ್ಕೇನಡ್ಡಿಯಿಲ್ಲ. ಆದ್ರೂ... ಯೋಚನೆ ಮಾಡು. ಕೇಳಕ್ಕಾಗತ್ತಾ?'

'ಹಹ್ಹಹ್ಹ! ಇಷ್ಟೇ ನಿನ್ಕಥೆ. ಸಾಯೋಕ್ಮುಂಚೆ ಏನಾದ್ರೂ ಇದ್ರೆ ಒದರು.'

'ಹುಂ! ನಿನ್ನ ಬೆಡ್ರೂಮಿನ, ಅಡುಗೆಮನೆಯ, ಸ್ನಾನದ ಮನೆಯ ವಿಷಯಗಳೆಲ್ಲಾ ನಂಗೊತ್ತು. ನಿಂದೊಂದೇ ಅಲ್ಲ, ನಿಮ್ಮಂಥವ್ರ ಮನೆಮನೆಗಳ ಕಥೆ ನಂಗೊತ್ತು. ಬೀದಿಗಳ ತುದಿಬುಡಗಳ ವಿಷಯ ನಂಗೊತ್ತು. ಹಾದಿ ಹೊರಳಿಕೆಗಳ ನರಳಿಕೆಯ ಸುದ್ದಿ ನಂಗೊತ್ತು. ಬಸ್ ನಿಲ್ದಾಣಗಳು, ಸಿನೆಮಾ, ಮಾಲ್ಗಳು, ಶಾಲೆ, ಕಾಲೇಜು, ಕಚೇರಿ... ಎಲ್ಲೀಂತ ಕೇಳು... ಅಲ್ಲೆಲ್ಲ ಇದ್ದೀವಲ್ಲ ನಾವು, ಗೊತ್ತಿಲ್ಲದೇ ಇರತ್ತಾ?'

'ಏನು ಅಪದ್ಧದ ಮಾತಿದು! ನನ್ನ ಬೆಡ್ರೂಮಿನ ವಿಷಯ ಹೇಗೆ ಗೊತ್ತು ನಿನಗೆ?, ಅಡುಗೆಮನೆಯ ವಿಷಯ ಏನು ಗೊತ್ತು ನಿನಗೆ? ಇಷ್ಟು ದಿನ ನಿಮ್ಮನ್ನ ಬಿಟ್ಟಿದ್ದು ನಂದೇ ತಪ್ಪು' ಎಂದವನೇ ಒಂದಿಷ್ಟು ಉಪ್ಪು ತಂದೆ. 'ನನ್ನನ್ನೂ ಕೊಲ್ಲುತ್ತೀಯಾ... ಮೀ ಟೂ?' ಎಂದು ಹೇಳಿ ಬಾಯಿ ಮುಚ್ಚುವ ಮುನ್ನವೇ ಅದರ ಮೇಲೆ ಉಪ್ಪು ಸುರಿದೇಬಿಟ್ಟೆ. ಸೀದಾ ಫೋನೆತ್ತಿಕೊಂಡು ಪೆಸ್ಟ್ ಕಂಟ್ರೋಲ್ ಕಂಪನಿಗೆ ಕರೆ ಮಾಡಿದೆ. ಅತಿ ಉಗ್ರವಾದ ರಾಸಾಯನಿಕ ಬಳಸಿ ಒಂದೂ ಹುಳ ಉಳಿಯದಂತೆ ನಾಶ ಮಾಡಬೇಕೆಂದು ಒತ್ತಿ ಒತ್ತಿ ಹೇಳಿದೆ.

'ಸರಿ. ಆದ್ರೆ ಅಷ್ಟೊಂದು ವಿಷ ಹಾಕಿದ್ರೆ ನಿಮಗೂ ತೊಂದರೆ ಆಗಬಹುದು. ಯೋಚ್ನೆ ಮಾಡಿ' ಎಂದ ಪೆಸ್ಟ್ ಕಂಟ್ರೋಲ್ ಮನುಷ್ಯ.

'ಮುಂದೆ ತೊಂದರೆ ಆಗ್ಬೋದು ಅನ್ನಕ್ಕೆ ಈಗೇನು ಸುಖವಾಗಿದ್ದೀನಾ. ದುಡ್ಡಿಗೇನು ಚೌಕಾಸಿ ಮಾಡ್ತಿಲ್ಲವಲ್ಲ, ಮೊದ್ಲು ಹೇಳಿದಷ್ಟು ಮಾಡಿ' ಎಂದು ಕಿರುಚಿ ಫೋನಿಟ್ಟೆ. ತಲೆ ಕೆಟ್ಟಂತಾಗಿ ಬಂದು ಫ್ಯಾನ್ ಒತ್ತಿ, ಟೀವಿ ಹಾಕಿಕೊಂಡೆ. ಯಾವುದೋ ಚಾನೆಲ್ಲಿನವರು ಬ್ರೇಕಿಂಗ್ ನ್ಯೂಸ್ ಎಂದು ಬಡ್ಕೋತಾ ಇದ್ದರು. ಅದರ ನಡುವೆ ಒಂದಿಷ್ಟು ಮಹಿಳೆಯರ ಮುಖ ಪ್ರತ್ಯಕ್ಷವಾಗಿ, 'ನಮ್ಮ ಮೇಲೂ ಉಪ್ಪು ಸುರಿಯುತ್ತೀರಾ? ಮೀ ಟೂ?' ಎಂದಂತಾಯಿತು. ಹೆದರಿ ಕಣ್ಣುಜ್ಜಿ ನೋಡಿದೆ. ಇದ್ದಕ್ಕಿದ್ದಂತೆ ಅವರ ಜಾಗದಲ್ಲಿ ನೂರಾರು ಸ್ನೈಲ್‌ಗಳು ಬಂದು ಬಾಯ್ತೆರೆದು ಮಾತನಾಡತೊಡಗಿದವು. ನಮ್ಮ ತಪ್ಪುಗಳೇ ಎದ್ದುಬಂದು ಬಾಯ್ದೆರೆದಂತೆ ಭಾಸವಾಗಿ, ಮುಂದೆ ನೋಡಲುಕೇಳಲೂ ಆಗದೆ ಕಣ್ಣುಕಿವಿ ಮುಚ್ಚಿಕೊಂಡು ಕೂತೆ.